ತಂದೆ ಕಾನೂನು ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದರು. ವೃತ್ತಿ ನಿಮಿತ್ತ ಅವರು ನಿರಂತರವಾಗಿ ಪ್ರಯಾಣ ಮಾಡಬೇಕಾಗುತ್ತಿತ್ತು. ಪುಸ್ತಕಗಳೆಂದರೆ ಅವರಿಗೆ ಅಪಾರ ಪ್ರೀತಿ. ಆ ಪುಸ್ತಕ ಪ್ರೀತಿಯನ್ನು ನನಗೂ ಹಂಚಿದರು. ತಾಯಿ ಉದ್ಯೋಗಸ್ಥೆಯಲ್ಲ; ಆದರೆ ಆಕೆ ನಮ್ಮ ಕುಟುಂಬದ ನಿಜವಾದ ಬೆನ್ನೆಲುಬಾಗಿದ್ದಳು. ಅವಳ ಧ್ವನಿಯಲ್ಲಿ ವಿಯೆಟ್ನಾಮಿ ಜೋಗುಳದ ಹಾಡುಗಳು ಮತ್ತು ಜನಪದ ಕಥೆಗಳ ಬೆಚ್ಚನೆಯ ಅನುಭೂತಿ ತುಂಬಿರುತ್ತಿತ್ತು. ನಮಗಾಗಿ ಅವಳು ಯುದ್ಧದಂತಹ ಕಠಿಣ ಸಮಯದಲ್ಲಿ ಅವಿರತವಾಗಿ ದುಡಿದಳು. ಕೌಟುಂಬಿಕ ಬಿಕ್ಕಟ್ಟಿನ ಸನ್ನಿವೇಶದಲ್ಲಿ ಆಕೆಯ ಪಾತ್ರ ದೊಡ್ಡದು. ಇಂದು ನಾನು ಪಶ್ಚಿಮ ಆಸ್ಟ್ರೇಲಿಯಾದ ನಿವಾಸಿ. ಇಲ್ಲಿ ನಾನು 20 ವರ್ಷಗಳಿಂದ ಶಾಲಾ ಶಿಕ್ಷಕಿಯಾಗಿದ್ದೇನೆ. ಪಾಠಪ್ರವಚನದ ಜೊತೆಗೆ, ಬರೆಯುತ್ತೇನೆ, ಓದುತ್ತೇನೆ, ಭಾಷಾಂತರಿಸುತ್ತೇನೆ ಮತ್ತು ಎಡಿಟಿಂಗ್ ಮಾಡುತ್ತೇನೆ. ವಲಸಿಗರಲ್ಲಿ ವಿಯೆಟ್ನಾಂ ಭಾಷೆ ಮತ್ತು ಸಂಸ್ಕೃತಿಯನ್ನು ಜೀವಂತವಾಗಿಡಲು ಪ್ರಯತ್ನಿಸುತ್ತಿದ್ದೇನೆ.

◆ **ನೀವು ಬದುಕಿನಲ್ಲಿ ಎದುರಿಸಿದ ಕಷ್ಟ–ನಷ್ಟಗಳೇನು?**

ಉದ್ಯೋಗ ಮತ್ತು ಶಿಕ್ಷಣವನ್ನು ಅರಸಿಹೋದ ಅನೇಕ ವಲಸಿಗರಂತೆ, ನನ್ನ ತಾಯ್ನಾಡನ್ನು ತೊರೆದು ಹೊಸ ಸಂಸ್ಕೃತಿಗೆ ಹೊಂದಿಕೊಳ್ಳುವ ಸವಾಲನ್ನು ನಾನೂ ಎದುರಿಸಿದೆ. ಬರವಣಿಗೆ ಮತ್ತು ಅನುವಾದದ ಮೇಲಿನ ನನ್ನ ವಿಶೇಷ ಆಸಕ್ತಿಯ ಜೊತೆಗೆ ಪೂರ್ಣ ಸಮಯದ ಬೋಧನಾ ವೃತ್ತಿಯನ್ನು ಬ್ಯಾಲೆನ್ಸ್ ಮಾಡೋದು ಎಂದಿಗೂ ಸುಲಭವಾಗಿರಲಿಲ್ಲ. ಹಲವು ಸಲ, ಕುಟುಂಬದ ಜವಾಬ್ದಾರಿಗಳು, ವೃತ್ತಿಪರ ಕರ್ತವ್ಯಗಳು ಮತ್ತು ಸೃಜನಶೀಲ ಆಕಾಂಕ್ಷೆಗಳ ನಡುವೆ ಸಿಲುಕಿ ಛಿದ್ರವಾದಂತೆ ಅನಿಸಿದೆ. ಆದಾಗ್ಯೂ, ಈ ಹೋರಾಟಗಳು ಪುಟಿದೇಳುವ ಚೈತನ್ಯದ ಶಕ್ತಿಮೂಲಗಳಾಗಿ ಮಾರ್ಪಟ್ಟವು. ಅವು ನನಗೆ ತಾಳ್ಮೆಯನ್ನು ಕಲಿಸಿದವು, ನನ್ನ ಗುರುತಿನ ಪ್ರಜ್ಞೆಯನ್ನು ತೀಕ್ಷ್ಣಗೊಳಿಸಿದವು ಮತ್ತು ಸಮಸ್ಯೆಗಳನ್ನು ನನ್ನ ಜೀವನದ ವಿವಿಧ ಅಧ್ಯಾಯಗಳನ್ನು ಸಂಪರ್ಕಿಸುವ ಸೇತುವೆಗಳಾಗಿ ಪರಿವರ್ತಿಸಿದವು. ಆದರೆ ಕೆಲಸದ ಒತ್ತಡದಿಂದಾಗಿ, ಕಾವ್ಯ ಕಮ್ಮಟಗಳು ಮತ್ತು ಸಾಹಿತ್ಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಅನೇಕ ಅವಕಾಶಗಳನ್ನು ಕಳೆದು ಕೊಂಡಿದ್ದೇನೆ. ನನ್ನ ಮನಸ್ಸಿನಲ್ಲಿ ಹಲವು ಯೋಜನೆಗಳಿವೆ, ಆದರೆ ಸಮಯ ಯಾವಾಗಲೂ ಕೈಜಾರಿ ಹೋಗುತ್ತಿದೆ. ಈ ಎಲ್ಲಾ ಮಿತಿಗಳ ನಡುವೆಯೂ ಸೃಜನಶೀಲ ಪ್ರಯಾಣವನ್ನು ಪ್ರೀತಿಯಿಂದ ಮುಂದುವರಿಸುತ್ತಿದ್ದೇನೆ.

◆ **ನಿಮ್ಮ ಮಾತೃಭಾಷೆ ಯಾವುದು? ನೀವು ಆಚರಿಸುವ ಹಬ್ಬ, ಆಚರಣೆಗಳ ಬಗ್ಗೆ ತಿಳಿಸಿ?**

ನನ್ನದು ವಿಯೆಟ್ನಾಮಿ ಭಾಷೆ. ಇದು ನನಗೆ ತಾಯ್ನಾಡಿನ ನೆನಪು ತರುವ ಮತ್ತು ಭಾವನೆಗಳನ್ನು ಬಿತ್ತುವ ಫಲವತ್ತಾದ ನೆಲ. ನನ್ನ ಕುಟುಂಬವು ಚಾಂದ್ರಮಾನ ಹೊಸ ವರ್ಷವನ್ನು ಸಾಂಪ್ರದಾಯಿಕ ವಿಧಿವಿಧಾನಗಳೊಂದಿಗೆ ಆಚರಿಸುತ್ತದೆ. ಉದಾಹರಣೆಗೆ ಹೊಸ ವರ್ಷವನ್ನು ಹುರುಪಿನಿಂದ ಸ್ವಾಗತಿಸಲು ಮನೆಯನ್ನು ಸ್ವಚ್ಛಗೊಳಿಸುವುದು, ಬನ್ ಚ್ಯುಂಗ್ ಮತ್ತು ಬನ್ ಟೆಟ್‌ನಂತಹ ಖಾದ್ಯಗಳನ್ನು ತಯಾರಿಸುವುದು, ಪೂರ್ವಜರ ಆರಾಧನೆಗಾಗಿ ಬಲಿಪೀಠಗಳನ್ನು ಸಿದ್ಧ ಮಾಡುವುದು ಮತ್ತು ಎಲ್ಲರೂ ಒಟ್ಟಿಗೆ ಕಲೆತು ಬೆಚ್ಚಗಿನ ಭಾವವನ್ನು ಹಂಚಿಕೊಳ್ಳುವುದು ಇತ್ಯಾದಿ... ನಡು ಶರತ್ಕಾಲದ ಹಬ್ಬವು ನನ್ನ ಬಾಲ್ಯದ ಮತ್ತೊಂದು ಪ್ರಮುಖ ಆಕರ್ಷಣೆ. ಆಗ ಕಂದೀಲು, ಮೂನ್ ಕೇಕ್‌ಗಳು ಮತ್ತು ಸಮುದಾಯದ ಕಲರವದಿಂದ ತುಂಬಿ ತುಳುಕುವುದು. ಆಸ್ಟ್ರೇಲಿಯಾದಲ್ಲಿ ವಾಸವಾಗಿದ್ದರೂ ಸಹ ನಾನು ಈ ಸಂಪ್ರದಾಯಗಳನ್ನು ಮುಂದುವರಿಸಿದ್ದೇನೆ. ಯಾಕೆಂದರೆ ಅವು ನನ್ನನ್ನು ಮತ್ತು ನನ್ನ ಕುಟುಂಬವನ್ನ ನಮ್ಮ ಪುರಾತನ ಸಾಂಸ್ಕೃತಿಕ ಬೇರುಗಳಿಂದ ದೂರ ಸರಿಯದಂತೆ ನೋಡಿಕೊಳ್ಳುತ್ತವೆ.

◆ **ಸಾಂಪ್ರದಾಯಿಕ ಅಡುಗೆಗೆ ಸಂಬಂಧಿಸಿದಂತೆ ನಿಮ್ಮ ಬಾಲ್ಯದ ನೆನಪನ್ನು ಹಂಚಿಕೊಳ್ಳಬಹುದೇ?**

ನನ್ನ ಅತ್ಯಂತ ಸುಮಧುರ ನೆನಪುಗಳಲ್ಲಿ ಒಂದು